**ದಿಃ24.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ ಆರೋಪಿ ಪರ ಶ್ರೀ.ಎನ್.ಎಸ್.ಎಸ್ ವಕೀಲರಿಂದಃ**

ನನ್ನ ತನಿಖಾ ಕಾಲಕ್ಕೆ ಈ ಪ್ರಕರಣದ ಚಾಸಾ 1 ರವರ ಸ್ವದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿದ್ದೇನೆ. ಸದರಿ ದಾಖಲೆಗಳನ್ನು ದಿಃ23.06.2024 ರಂದು ನೋಡಿರುತ್ತೇನೆ. ನಿಪಿ.5 ರಲ್ಲಿ "ಮಡಿಕೇರಿ ನಗರದ ಓಂಕಾರೇಶ್ವರ ದೇವಸ್ಥಾನಕ್ಕೆ ತೆರಳುವ ರಸ್ತೆಯ ಬದಿಯಲ್ಲಿ ಮಡಿಕೇರಿಯ ನಿವಾಸಿ ಪುರುಷೋತ್ತಮ ಎಂಬುವವರು ಸಾರ್ವಜನಿಕರಿಗೆ ಅಕ್ರಮವಾಗಿ ಮದ್ಯಪಾನ ಮಾಡುತ್ತಿರುವುದಾಗಿ ಮಾಹಿತಿ ಬಂದ ಮೇರೆಗೆ" ಎಂದು ಬರೆಯಲಾಗಿದೆ ಎಂದರೆ ಸರಿ. ನಾನು ಈ ಪ್ರಕರಣದ ಕಡತವನ್ನು ತನಿಖೆಗಾಗಿ ಸ್ವೀಕರಿಸಿದ ಕಾಲಕ್ಕೆ ಸಂಚಾರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದರೆ ಸರಿ. ಸಂಚಾರಿ ಪೊಲೀಸ್ ಠಾಣೆಯಲ್ಲಿ ಇಟ್ಟಿರುವ ದಿನಚರಿಯಲ್ಲಿ ಈ ಪ್ರಕರಣದ ತನಿಖೆ ವಹಿಸಿಕೊಂಡ ಬಗ್ಗೆ ಉಲ್ಲೇಖಿಸಿದ್ದೇನೆ. ದಿಃ23.06.2024 ರಂದು ಆ ವಿಚಾರವನ್ನು ಸಂಚಾರಿ ಪೊಲೀಸ್ ಠಾಣೆಯಲ್ಲಿ ಇಟ್ಟಿರುವ ದಿನಚರಿಯಲ್ಲಿ ಉಲ್ಲೇಖಿಸಿದ್ದೇನೆ. ಸದರಿ ದಿನಚರಿಯನ್ನು ದೋಷಾರೋಪಣಾ ಪತ್ರದ ಜೊತೆ ಹಾಜರು ಮಾಡಲು ನನಗೇನೂ ತೊಂದರೆ ಇರಲಿಲ್ಲ. ದಿಃ28.06.2024 ರಂದು ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿ. ಸಾಕ್ಷಿದಾರರ ಹೇಳಿಕೆಯಲ್ಲಿ ದಿನಾಂಕವನ್ನು ತಿದ್ದುಪಡಿ ಮಾಡಿಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾಕ್ಷಿದಾರರ ಹೇಳಿಕೆಗಳು ಕಂಪ್ಯೂಟರ್

ಟೈಪಿಂಗ್ ರೂಪದಲ್ಲಿ ಇದ್ದು ಅದರಲ್ಲಿ ದಿನಾಂಕ ತಪ್ಪಾಗಿತ್ತು ಹಾಗಾಗಿ ಸರಿಪಡಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿದಾರರ ಹೇಳಿಕೆಗಳ ಮೇಲೆ ಯಾವ ದಿನಾಂಕ ನಮೂದು ಆಗಿತ್ತು ಎಂದರೆ ಸಾಕ್ಷಿ 28.06.2024 ರಂದು ಬೆರಳಚ್ಚು ಆಗಿತ್ತು ಆದರೆ 8 ರ ಅಂಕಿ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ ಹಾಗಾಗಿ ಅದನ್ನು ಪೆನ್ನಿನಿಂದ ಸರಿ ಪಡಿಸಲಾಗಿದೆ ಎನ್ನುತ್ತಾರೆ. ಸದರಿ ಅಂಕಿಯನ್ನು ನಾನೇ ಸರಿಪಡಿಸಿರುತ್ತೇನೆ. ನಿಪಿ.6 ರಲ್ಲೂ ಸಹ ದಿನಾಂಕ ತಿದ್ದುಪಡಿಯಾಗಿದೆ ಎಂದರೆ ಸಾಕ್ಷಿ 8 ಎಂಬುದನ್ನು ತಿದ್ದಪಡಿ ಮಾಡಲಾಗಿದೆ ಎನ್ನುತ್ತಾರೆ. ಯಾವ ಕಾರಣಕ್ಕಾಗಿ ಸದರಿ ಅಂಕಿಯನ್ನು ತಿದ್ದಲಾಗಿದೆ ಎಂದರೆ ಸಾಕ್ಷಿ 8 ರ ಅಂಕಿ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ ಹಾಗಾಗಿ ಅದನ್ನು ನಾನೇ ಸರಿಪಡಿಸಿದ್ದೇನೆ ಎನ್ನುತ್ತಾರೆ. ನಿಪಿ.6 ರ ದಾಖಲೆ ದೃಢೀಕರಣ ಪತ್ರ ಆಗಿದ್ದರಿಂದ ಅದರಲ್ಲಿ ಯಾವುದೇ ಭಾಗವನ್ನು ತಿದ್ದುಪಡಿ ಮಾಡುವ ಅಧಿಕಾರ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ.6ರಲ್ಲಿ ಫೋಟೊಗಳನ್ನು ಠಾಣಾ ಎಸರ್ ಕಂಪ್ಯೂಟರ್ ಸಹಾಯದಿಂದ ವರ್ಗಾವಣೆ ಮಾಡಿಕೊಂಡು ಫೋಟೊ ಪ್ರಿಂಟ್ ಹಾಕಿ ಅವುಗಳನ್ನು ತನಿಖಾಧಿಕಾರಿ ಮುಂದೆ ಹಾಜರು ಪಡಿಸಲಾಗಿದೆ ಎಂದು ಉಲ್ಲೇಖ ಇದೆ ಎಂದರೆ ಸರಿ. ಪ್ರಾ.ಸಾ 3 ರವರು ಯಾವ ದಿನಾಂಕದಂದು ಎಷ್ಟು ಫೋಟೊಗಳನ್ನು ಪ್ರಿಂಟ್ ಹಾಕಿದ್ದಾರೆ ಎಂದು ಈಗ ನೆನಪಿಲ್ಲ. ನಾನು ಇಲಾಖಾ ಹ್ಯಾಂಡಿಕ್ಯಾಮನ್ನು ಪರಿಶೀಲನೆ ಮಾಡಿಲ್ಲ. ಪ್ರಾಸಾ3 ರವರು ನನಗೆ ಮೂರು ಫೋಟೊಗಳನ್ನು ಹಾಜರು ಮಾಡಿದರು. ಸದರಿ ಮೂರು

ಫೋಟೊಗಳು ಕಡತದಲ್ಲಿ ಇಲ್ಲ ಎಂದರೆ ಸಾಕ್ಷಿ ನ್ಯಾಯಾಲಯದ ಕಡತದಲ್ಲಿ ಒಂದು ಫೋಟೊ ಇದೆ ಮತ್ತು ಇತರ ಫೋಟೊಗಳನ್ನು ದೋಷಾರೋಪಣಾ ಪತ್ರದ ಪ್ರತಿಗಳಲ್ಲಿ ಲಗತ್ತಿಸಲಾಗಿದೆ ಎನ್ನುತ್ತಾರೆ. ಚಾಸಾ 2 ಮತ್ತು 3 ರವರು ಮಹಜರ್ ಪೂರ್ವದಲ್ಲಿ ಎಲ್ಲಿ ಇದ್ದರು ಮತ್ತು ಅವರನ್ನು ಎಲ್ಲಿಂದ ಕರೆ ತರಲಾಗಿತ್ತು ಎಂದು ನಾನು ತಿಳಿದುಕೊಂಡಿಲ್ಲ. ಚಾಸಾ 2 ಮತ್ತು 3 ರವರು ಏನು ಕೆಲಸ ಮಾಡುತ್ತಾರೆ ಎಂದು ತಿಳಿದುಕೊಂಡಿದೀರಾ ಎಂದರೆ ಸಾಕ್ಷಿ ಅವರು ಕೂಲಿ ಕೆಲಸ ಮಾಡುತ್ತಾರೆ ಎನ್ನುತ್ತಾರೆ. ಆ ವಿಚಾರ ನಿಮಗೆ ಯಾವಾಗ ತಿಳಿಯಿತು ಎಂದರೆ ಸಾಕ್ಷಿ ನಾನು ಅವರ ಹೇಳಿಕೆಯನ್ನು ದಾಖಲಿಸಿಕೊಂಡ ಕಾಲಕ್ಕೆ ತಿಳಿಯಿತು ಎನ್ನುತ್ತಾರೆ. ಮಹಜರ್ ಕಾಲಕ್ಕೆ ನಿಮ್ಮ ಇಲಾಖಾ ವತಿಯಿಂದ ಎಷ್ಟು ಜನ ಸ್ಥಳಕ್ಕೆ ಹೋಗಿದ್ದರು ಎಂದರೆ ಚಾಸಾ 1, 4 ಮತ್ತು 5 ರವರು ಹೋಗಿದ್ದರು ಎನ್ನುತ್ತಾರೆ. ಸ್ಥಳದಲ್ಲಿ ಛಾಯಾಚಿತ್ರ ಯಾರು ತೆರೆದರು ಎಂದು ನಿಮಗೆ ತಿಳಿಯಿತು ಎಂದರೆ ಸಾಕ್ಷಿ ಫ್ರಾಸಾ 3 ರವರು ಛಾಯಾಚಿತ್ರ ತೆಗೆದಿರುವುದಾಗಿ ತಿಳಿಯಿತು ಎನ್ನುತ್ತಾರೆ. ಮಹಜರ್ ಜರುಗಿಸಲಾಗಿತು ಎಂದು ಹೇಳಲಾದ ಕಾಲಕ್ಕೆ ನಿಮ್ಮ ಇಲಾಖಾ ವತಿಯಿಂದ ಮಹಿಳಾ ಸಿಬ್ಬಂದಿ ಒಬ್ಬರು ಬಂದಿದ್ದರಾ ಎಂದರೆ ಸಾಕ್ಷಿ ನಾನು ಸ್ಥಳಕ್ಕೆ ಹೋಗಿರಲಿಲ್ಲ ಹಾಗಾಗಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಿಪಿ.2 ರಲ್ಲಿ ಮಹಿಳಾ ಸಿಬ್ಬಂದಿ ಸಹಿ ಮಾಡಿರುವುದು ಕಂಡು ಬರುತ್ತದೆ ಎಂದರೆ ಸರಿ. ನಿಪಿ.2 ರ ಮೇಲೆ ಸಹಿ ಮಾಡಿರುವ ಮಹಿಳಾ ಸಿಬ್ಬಂದಿಯನ್ನು

ವಿಚಾರಣೆಗೆ ಒಳಪಡಿಸಿ ಹೇಳಿಕೆ ದಾಖಲಿಸಿಕೊಂಡಿಲ್ಲ. ಮಹಿಳಾ ಸಿಬ್ಬಂದಿ ಸ್ಥಳಕ್ಕೆ ಹೋಗಿರುವ ವಿಚಾರ ನಾನು ಕಡತವನ್ನು ಪರಿಶೀಲಿಸಿದಾಗಲೇ ನನ್ನ ಗಮನಕ್ಕೆ ಬಂತು. ನನ್ನ ತನಿಖಾ ಕಾಲಕ್ಕೆ ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ. ಆದಾಯ ತೆರಿಗೆ ಕಚೇರಿ ಪಶ್ಚಿಮ ದಿಕ್ಕಿಗೆ ಮುಖ ಮಾಡಿದೆ ಎಂದರೆ ಸಾಕ್ಷಿ ನಾನು ಸ್ಥಳಕ್ಕೆ ಹೋಗಿಲ್ಲ ಹಾಗಾಗಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಮಡಿಕೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ನನಗೆ ಎಲ್ಲೆಲ್ಲಿ ಸರ್ಕಾರಿ ಕಚೇರಿಗಳು ಇವೆ ಎಂದು ಮಾಹಿತಿ ಇದೆ.

2. ಅಮಾನತು ಪಡಿಸಲಾಯಿತು ಎಂದು ಹೇಳಲಾದ ಮಾಲನ್ನು ರಾಸಾಯನಿಕ ಪ್ರಯೋಗಾಲಯಕ್ಕೆ ಚಾಸಾ 1 ರವರೆ ಕಳುಹಿಸಿದ್ದರು. ರಾಸಾಯನಿಕ ಪ್ರಯೋಗಲಯದಿಂದ ಬಂದ ವಿಶ್ಲೇಷಣಾ ವರದಿ ಮತ್ತು ಖಾಲಿ ಪೌಚಗಳನ್ನು ನಾನೇ ಸ್ವೀಕರಿಸುತ್ತೇನೆ. ರಾಸಾಯನಿಕ ಪ್ರಯೋಗಾಲಯದಿಂದ ಬಂದ ವರದಿಯಲ್ಲಿ ಸ್ಮಾರ್ಟ್ ಕೋಡ್ ಎಂದು ಉಲ್ಲೇಖ ಇದೆ ಎಂದರೆ ಸರಿ. ಮಹಜರ್ ನಲ್ಲಿ ಸ್ಮಾರ್ಟ್ ಕೋಡ್ ನ ಕ್ರಮ ಸಂಖ್ಯೆ ಉಲ್ಲೇಖ ಇಲ್ಲ ಎಂದರೆ ಸರಿ. ಆರೋಪಿಯಿಂದ ತಲಾ 100/- ರೂ ಮುಖ ಬೆಲೆಯ ಆರು ನೋಟುಗಳನ್ನು ಅಮಾನತು ಪಡಿಸಲಾಗಿದೆ. ಸದರಿ ನೋಟುಗಳ ಸಂಖ್ಯೆಯನ್ನು ಮಹಜರ್ ನಲ್ಲಿ ಉಲ್ಲೇಖಿಸಿಲ್ಲ. ನೀಲಿ ಬಣ್ಣದ ಬಟ್ಟೆ ಬ್ಯಾಗನ್ನು ನಿಮ್ಮ ತನಿಖಾ ಕಾಲಕ್ಕೆ ನೋಡಿದೀರಾ ಎಂದರೆ ಸಾಕ್ಷಿ ನಾನು ಅದನ್ನು ಗಮನಿಸಿಲ್ಲ ಎನ್ನುತ್ತಾರೆ. ಪ್ಲಾಸ್ಟಿಕ್

ಕವರ್ ಮತ್ತು ಬಟ್ಟೆ ಬ್ಯಾಗಿಗೂ ವ್ಯತ್ಯಾಸ ಇದೆ ಎಂದರೆ ಸರಿ. ಮದ್ಯದ ಪೌಚಗಳ ಮೇಲೆ ಇರುವ ಕ್ರಮ ಸಂಖ್ಯೆ ಮತ್ತು ಬ್ಯಾಚ್ ನಂಬರ್ ಹಾಗೂ ಬಾರ್ ಕೋಡ್ ನ್ನು ಪರಿಶೀಲಿಸಿದರೆ ಸದರಿ ಮಾಲು ಯಾವ ಮದ್ಯದ ಅಂಗಡಿಗೆ ಸರಬರಾಜು ಆಗಿದೆ ಎಂದು ಕಂಡುಕೊಳ್ಳಬಹುದು ಎಂದರೆ ಸರಿ. ನಾನು ಈ ಸಂಬಂಧ ಯಾವುದೇ ತನಿಖೆ ಮಾಡಿಲ್ಲ. ಘಟನೆ ನಡೆಯಿತು ಎನ್ನುವ ಸ್ಥಳದಲ್ಲಿ ಅಂಗಡಿ ಮುಗ್ಗಟ್ಟುಗಳು, ಮನೆಗಳು, ಕಚೇರಿಗಳು ಇವೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಸಾಕಷ್ಟು ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ. ನಿಮ್ಮ ತನಿಖಾ ಕಾಲಕ್ಕೆ ಘಟನೆ ನಡೆಯಿತು ಎನ್ನುವ ಸ್ಥಳದಲ್ಲಿ ಇದ್ದ ಸಿಸಿಟಿವಿ ದೃಶ್ಯಾವಳಿಗಳನ್ನು ಕಲೆಹಾಕುವ ಪ್ರಯತ್ನ ಮಾಡಿದೀರಾ ಎಂದರೆ ಸಾಕ್ಷಿ ಸ್ಥಳದಲ್ಲಿ ಯಾವುದೇ ಸಿಸಿಟಿವಿ ಯನ್ನು ಅಳವಡಿಸಿರಲಿಲ್ಲ ಎನ್ನುತ್ತಾರೆ. ನಾನು ಸ್ಥಳಕ್ಕೆ ಹೋಗೆಯಿಲ್ಲ ಹಾಗಾಗಿ ಯಾವುದೇ ಸಿಸಿಟಿವಿ ದೃಶಾವಳಿಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಚಾಸಾ 2 ರವರ ಮಾತು ಕೇಳಿ ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲಕ್ಕೆ ಆರೋಪಿ ಯಾವುದೇ ತಪ್ಪು ಎಸಗಿಲ್ಲ ಎಂದು ಕಂಡು ಬಂದರು ಆತನ ವಿರುದ್ದ ಸುಳ್ಳು ದೋಪಾರೋಪಣಾ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸೂಕ್ತ ತನಿಖೆ ನಡೆಸಿದ್ದರೆ ಆರೋಪಿ ಯಾವುದೇ ತಪ್ಪು ಎಸಗಿಲ್ಲ ಎಂದರೆ ಸ್ಪಷ್ಟ ಆಗುತ್ತಿತ್ತೂ ಎಂದರೆ ಸರಿಯಲ್ಲ. ನಿಪಿ.3 ನ್ನು ಈ ಪ್ರಕಣಕ್ಕಾಗಿ ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಿಪಿ.3 ನ್ನು ಯಾವ

ಜಾಗದಲ್ಲಿ ತೆಗೆಯಲಾಯಿತು ಎಂದು ಸ್ಪಷ್ಟವಾಗಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ಮಹಜರ್‌ನ್ನು ಠಾಣೆಯಲ್ಲಿ ಸೃಷ್ಟಿಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮ.1 ರಿಂದ 12 ಕೂಕ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.